ಇ. ಜೈವಿಕ ತಂತ್ರಜ್ಞಾನ ಪಾರ್ಕ್ ಸ್ಥಾಪನೆಗಾಗಿ ಪ್ರಥಮ ಪ್ರಯತ್ನದಲ್ಲಿ ಕೃಷಿ ವಿಶ್ವ ವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಕೊಡಿಗೆಹಳ್ಳಿ(ಪ್ಲಾಂಟೇಷನ್) ಗ್ರಾಮದ ಸರ್ವೆ ನಂ.1ರಲ್ಲಿ ಸ್ಥಳ ಆಯ್ಕೆ ಮಾಡಲಾಗಿತ್ತು. ಸದರಿ ಸ್ಥಳವನ್ನು ನೀಡಲು ವಿಶ್ವವಿದ್ಯಾನಿಲಯ ಒಪ್ಪದಿರುವ ಕಾರಣ ಪರ್ಯಾಯ ನಿವೇಶನವನ್ನು ಜೈವಿಕ ತಂತ್ರಜ್ಞಾನ ಕಾರಿಡಾರ್ ವ್ಯಾಪ್ತಿಯಲ್ಲಿಯೇ ಆಯ್ಕೆ ಮಾಡಿಕೊಳ್ಳುವ ಪ್ರಯತ್ನ ಜಾರಿಯಲ್ಲಿದೆ. ಜೈವಿಕ ತಂತ್ರಜ್ಞಾನ ಪಾರ್ಕ್ ಸ್ಥಾಪನೆಗೆ ರಾಚೇನಹಳ್ಳಿ ಗ್ರಾಮದ ಖಾಸಗಿ ಜಮೀನಿನ ಪೈಕಿ 50 ಎಕರೆ ಸ್ಥಳವನ್ನು ಪಡೆಯುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಈ ಪ್ರಸ್ತಾಪಿತ ಜೈವಿಕ ತಂತ್ರಜ್ಞಾನ ಪಾರ್ಕ್‌ನಲ್ಲಿ ಸರ್ಕಾರದ ವತಿಯಿಂದ ನಿರ್ಮಿಸಲುದ್ದೇಶಿಸಿರುವ ಕಾಮನ್ ಫೆಸಿಲಿಟಿ ಸೆಂಟರ್ ಸ್ಥಾಪನೆಗಾಗಿ ಅಂದಾಜು ರೂ.5.00 ಕೋಟಿ ವೆಚ್ಚ ಆಗಬಹುದು.

ಮೈಸೂರು ಲ್ಯಾಂಪ್ಸ್ ಕಾರ್ಖಾನೆಯನ್ನು ಖಾಸಗೀಕರಣಗೊಳಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 402(639)

ಸದಸ್ಯರ ಹೆಸರು : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ)

ಉತ್ತರಿಸುವ ಸಚಿವರು : ಶ್ರೀ ಆರ್.ವಿ.ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

ಪ್ರಶ್ನೆ

ಅ) ಮೈಸೂರು ಲ್ಯಾಂಪ್ ಕಾರ್ಖಾನೆ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಪ್ರತಿವರ್ಷ ಪಡೆದ ಲಾಭ ಅಥವಾ ಅನುಭವಿಸಿದ ನಷ್ಟದ ಬಗ್ಗೆ ವಿವರ ನೀಡುವುದು?

ಆ) ಸದರಿ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು?

ಇ) ಎಷ್ಟು ಕಾರ್ಮಿಕರು ಸ್ವಯಂ ನಿವೃತ್ತಿ ಯೋಜನೆಗೆ ಅರ್ಜಿ ಸಲ್ಲಿಸಿರುತ್ತಾರೆ?

ಈ) ಈ ಕಾರ್ಮಿಕರನ್ನು ಇತರೆ ಸರ್ಕಾರಿ ಕೈಗಾರಿಕೆ ಅಥವಾ ಸರ್ಕಾರಿ ಇಲಾಖೆಗಳಿಗೆ ವರ್ಗಾಯಿಸಲು ಸಾಧ್ಯವಿಲ್ಲವೇ?

ಉ) ಸದರಿ ಕಾರ್ಖಾನೆಯನ್ನು ಖಾಸಗೀಯವರಿಗೆ ಮಾರಾಟ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಉತ್ತರ

ಅ) ಮೈಸೂರು ಲ್ಯಾಂಪ್ಸ್ ಕಾರ್ಖಾನೆ 26.8.1936ರಂದು ನಿಗಮಿತವಾಯಿತು. ಮತ್ತು ಜುಲೈ 1983ರಲ್ಲಿ ಕರ್ನಾಟಕ ಸರ್ಕಾರದ ಒಂದು ಸಾರ್ವಜನಿಕ ಸಂಸ್ಥೆಯಾಯಿತು. ಲಾಭ : ನಷ್ಟದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಬೇರೆ ಬೇರೆ ಇಲಾಖೆಗಳಿಗೆ ಪ್ರತಿಯೋಜನೆ ಮೇಲೆ ತೆರಳಿರುವ 263 ನೌಕರರನ್ನು ಸೇರಿದಂತೆ ಸಂಸ್ಥೆಯಲ್ಲಿ ಒಟ್ಟು 1572 ನೌಕರರಿದ್ದಾರೆ.

ಇ) ದಿನಾಂಕ:19.01.2002ರವರೆಗೆ ಒಟ್ಟು 215 ನೌಕರರು ಸ್ವಯಂ ನಿವೃತ್ತಿ ಯೋಜನೆಗೆ ಅರ್ಜಿಗಳನ್ನು ಸಲ್ಲಿಸಿರುತ್ತಾರೆ.

ಈ) ಉದ್ಭವಿಸುವುದಿಲ್ಲ.

ಉ) ಸದರಿ ಸಂಸ್ಥೆಯನ್ನು ಮುಚ್ಚಿಬಿಡಲು ದಿನಾಂಕ:4.01.2002ರಂದು ಹೊರಡಿಸಿರುವ ಸರ್ಕಾರಿ ಆದೇಶದ ಹಿನ್ನೆಲೆಯಲ್ಲಿ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

DETAILS PROFIT/LOSS FROM 1983-84 TO 2000-01

(Rs. in lakhs)

Sl. No.	Year	Profit	Loss
1	1983-84	235	-
2	1984-85	245	-
3	1985-86	54	-
4	1986-87	-	34
5	1987-88	15	-
6	1988-89 (for 9 months)*	8	-
7	1989-90	47	-
8	1990-91	268	-
9	1991-92	255	-
10	1992-93	123	-
11	1993-94	-	58
12	1994-95	-	190
13	1995-96	-	1247
14	1996-97	-	1825
15	1997-98	-	1125
16	1998-99	-	1035
17	1999-00	-	1028
18	2000-01(Unaudited)	-	1553

Note: During the last 18 years, the Company has earned prefits in 9 years and incurred losses in 9 years.

* Due to change in Accounting year.